MAY 09, 2024

ALL INDIA RADIO- DHARWAD

PRADESH SAMACHARA (KANNADA) 7:05 AM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದುತ್ತಿರುವವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ರಾಜ್ಯದಲ್ಲಿ ಮಳೆ ಕೊರತೆ; ರಾಜ್ಯ ವಿಪತ್ತು ಪರಿಹಾರ ನಿಧಿಯಡಿ, ಬರ ನಿರ್ವಹಣೆಗೆ ಆದ್ಯತೆ.
- ಧಾರವಾಡ–ಹುಬ್ಬಳ್ಳಿಯ ರೈತರ ಸಂತೆಗಳಿಗೆ, 'ದೇಸಿ'ಯ, ಜವಾರಿ ಸಂತಿ, ಮಾದರಿ.
- ಎಸ್.ಎಸ್.ಎಲ್.ಸಿ. ಪರೀಕ್ಷೆ 1 ರ ಫಲಿತಾಂಶ ಇಂದು, ಪ್ರಕಟ.
- ಥಲಸ್ಸೇಮಿಯಾ ಜಾಗ್ರತಿ, ವಿಶ್ವ ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ರಾಜ್ಯದಲ್ಲಿ ಮಳೆ ಕೊರತೆ ಹಿನ್ನೆಲೆ, ರಾಜ್ಯ ವಿಪತ್ತು ಪರಿಹಾರ ನಿಧಿಯಡಿ ಬರ ನಿರ್ವಹಣೆ ಮತ್ತು ಪರಿಹಾರಕ್ಕಾಗಿ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಚಾಮರಾಜನಗರ, ಚಿತ್ರದುರ್ಗ, ರಾಮನಗರ ಹಾಗೂ ವಿಜಯನಗರ ಜಿಲ್ಲೆಗಳಲ್ಲಿ ಒಟ್ಟು 28 ಗೋ ಶಾಲೆಗಳನ್ನು ತೆರೆಯಲಾಗಿದ್ದು, 35 ಮೇವು ಬ್ಯಾಂಕ್‌ಗಳು ಕಾರ್ಯನಿರ್ವಹಿಸುತ್ತಿವೆ. ಕಂದಾಯ ಇಲಾಖೆಯ ವಿಪತ್ತು ನಿರ್ವಹಣಾ ವಿಭಾಗ, ಗ್ರಾಮೀಣ ಪ್ರದೇಶಗಳಲ್ಲಿ ಟ್ಯಾಂಕರ್‌ಗಳ ಮೂಲಕ 506 ಗ್ರಾಮಗಳಿಗೆ ಮತ್ತು ಖಾಸಗಿ ಕೊಳವೆ ಬಾವಿಗಳ ಮೂಲಕ, ಸಾವಿರದ 451 ಗ್ರಾಮಗಳಿಗೆ ಕುಡಿಯುವ ನೀರನ್ನು ಪೂರೈಸುತ್ತಿದೆ. ನಗರ ಪ್ರದೇಶಗಳಲ್ಲಿ 153 ವಾರ್ಡ್‌ಗಳಿಗೆ ಟ್ಯಾಂಕರ್‌ಗಳ ಮೂಲಕ, 35 ವಾರ್ಡ್‌ಗಳಿಗೆ ಖಾಸಗಿ ಕೊಳವೆ ಬಾವಿಗಳ ಮೂಲಕ ನೀರು ಪೂರೈಸುತ್ತಿದೆ.

<><><>

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ, ಹನೂರು ಮತ್ತು ಚಾಮರಾಜನಗರ ತಾಲೂಕುಗಳನ್ನು ತೀವ್ರ ಬರ ಪೀಡಿತ ತಾಲೂಕುಗಳೆಂದು ಸರ್ಕಾರ ಘೋಷಿಸಿದೆ. ಕೊಳ್ಳೇಗಾಲ ಹಾಗೂ ಯಳಂದೂರು ತಾಲೂಕುಗಳನ್ನು ಸಾಧಾರಣ ಬರ ಪೀಡಿತ ಪ್ರದೇಶಗಳೆಂದು, ಪರಿಗಣಿಸಲಾಗಿದೆ.

ಜನರಿಗೆ ಮತ್ತು ಜಾನುವಾರುಗಳಿಗೆ ಕುಡಿಯುವ ನೀರು ಮತ್ತು ಜಾನುವಾರುಗಳ ಮೇವಿಗೆ ಕೊರತೆಯಾಗದಂತೆ, ಜಿಲ್ಲಾಡಳಿತದ ವತಿಯಿಂದ ಕ್ರಮ ಕೈಗೊಳ್ಳಲಾಗಿದೆ ಎಂದು, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷೆ, ಶಿಲ್ಪಾ ನಾಗ್ ತಿಳಿಸಿದ್ದಾರೆ.

<><><>

ಧಾರವಾಡ–ಹುಬ್ಬಳ್ಳಿಯಲ್ಲಿ ರೈತರ ಸಂತೆಗಳನ್ನು ಆರಂಭಿಸಲು, ಪೂರಕ ಪ್ರಯತ್ನಕ್ಕೆ ದೇಸಿ ಸಂಸ್ಥೆಯೊಂದಿಗೆ, ಮೈಸೂರಿನ ಸಹಜ ಸಮೃದ್ಧ ಕೈಜೋಡಿಸಿದೆ. ಹಣ್ಣು ತರಕಾರಿ ಇಲ್ಲದೇ ರೈತರ ಸಂತೆ ಯಶಸ್ವಿಯಾಗುವುದು ಕಷ್ಟ. ರೈತರು ಮತ್ತು ಸಂತೆ ಇಬ್ಬರನ್ನೂ ಜೋಡಿಸುವ ಪ್ರಯತ್ನವೇ, ಜವಾರಿ ಸಂತಿ ಎನ್ನುತ್ತಾರೆ, ಗ್ರಾಮೀಣಾಭಿವೃದ್ಧಿ ತಜ್ಞ, ಧಾರವಾಡದ ಡಾಕ್ಟರ್ ಪ್ರಕಾಶ ಭಟ್.

<><><>

ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕು ಬೆಟಸೂರು ಗ್ರಾಮದ ಗದಿಗೆಪ್ಪ ಹೆಬ್ಬಾಳ ಜವಾರಿ ತರಕಾರಿ ಕೃಷಿ ಕೈಗೊಂಡು, ಧಾರವಾಡ ಜವಾರಿ ಸಂತೆಗೆ ಬಂದು ಸ್ವತಃ ಮಾರಿ, ಯೋಗ್ಯ ಬೆಲೆ ಪಡೆಯುತ್ತಿದ್ದಾರೆ.

ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ರೈತ ಗದಿಗೆಪ್ಪ ಹೆಬ್ಬಾಳ ಧ್ವನಿ 45 ಸೆಕೆಂದುಗಳು

<><><>

ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯ, ಗಣಿ ಬಾಧಿತ ಪ್ರದೇಶಗಳ, ಸಮಗ್ರ ಪರಿಸರ ಅಭಿವೃದ್ಧಿ ಯೋಜನೆಯಡಿ, ಅನುಮೋದನೆಗೆ ಬಾಕಿ ಇರುವ, ಕಾಮಗಾರಿಗಳ ವಿಸ್ತೃತ ಯೋಜನಾ ವರದಿ, ಶೀಘ್ರವೇ ಸಿದ್ಧಪಡಿಸಿ, ರಾಜ್ಯ ಗಣಿ ಪರಿಸರ ಪುನಃಶ್ಚೇತನ ನಿಗಮಕ್ಕೆ ಸಲ್ಲಿಸುವಂತೆ, ಚಿತ್ರದುರ್ಗ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಸರ್ವೋಚ್ಚ ನ್ಯಾಯಾಲಯದ ಕೇಂದ್ರೀಯ ಉನ್ನತಾಧಿಕಾರ ಸಮಿತಿ, ಎಲ್ಲ ಕಾಮಗಾರಿಗಳ ಮೇಲ್ವಿಚಾರಣೆ ನಡೆಸಲಿದೆ. ಕಾಮಗಾರಿಗಳ ಮೇಲ್ವಿಚಾರಣೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ, ಪ್ರತ್ಯೇಕ ವಿಭಾಗ ಕಾರ್ಯಾರಂಭಿಸಲಿದ್ದು, ವಾರಕೊಮ್ಮೆ ಪರಿಶೀಲನೆ ನಡೆಯಲಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಎಸ್.ಎಸ್.ಎಲ್.ಸಿ. ಪರೀಕ್ಷೆ 1 ರ ಫಲಿತಾಂಶ ಇಂದು, ಗುರುವಾರ ಪ್ರಕಟವಾಗಲಿದೆ ಎಂದು, ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ತಿಳಿಸಿದೆ.ಬೆಳಗ್ಗೆ 10.30ರ ಬಳಿಕ, ಮಂಡಳಿಯ ಜಾಲತಾಣ kar results.nic.in ನಲ್ಲಿ ಫಲಿತಾಂಶ ವೀಕ್ಷಿಸಬಹುದು.

<><><>

ಪ್ರಸಕ್ತ ಸಿ.ಇ.ಟಿ. ಪರೀಕ್ಷೆ ಅರ್ಜಿಯಲ್ಲಿ ದಾಖಲಿಸಿರುವ, ಆರ್.ಡಿ ಸಂಖ್ಯೆ ಸೇರಿದಂತೆ, ಇತರೆ ತಿದ್ದುಪಡಿ ಮಾಡಿಕೊಳ್ಳಲು, ಇಂದಿನಿಂದ 15ನೇ ತಾರೀಖಿನ ವರೆಗೆ ಅವಕಾಶ ನೀಡಲಾಗಿದೆ ಎಂದು, ಕರ್ನಾಟಕ ಪ್ರರೀಕ್ಷಾ ಪ್ರಾಧಿಕಾರ, ಜಾಲತಾಣ ಎಕ್ಸ್‌ನಲ್ಲಿ ಪ್ರಕಟಿಸಿದೆ.

<><><>

ಥಲಸ್ಸೇಮಿಯಾ ಜಾಗ್ರತಿ ವಿಶ್ವ ದಿನ ಆಚರಿಸಲಾಯಿತು. "ಜೀವನವನ್ನು ಸಶಕ್ತಗೊಳಿಸುವುದು, ಎಲ್ಲರಿಗೂ ಸಮಾನ ಮತ್ತು ಸುಲಭ ಥಲಸ್ಸೇಮಿಯಾ ಚಿಕಿತ್ಸೆಯ ಲಭ್ಯತೆ  ಖಾತ್ರಿ ಪಡಿಸುವುದು" ಈ ಬಾರಿಯ ಆಚರಣೆಯ ಧ್ಯೇಯವಾಗಿತ್ತು. ಥಲಸ್ಸೇಮಿಯಾ ವಿಶ್ವ ದಿನದಂದು, ಆನುವಂಶಿಕ ರಕ್ತದ ಅಸ್ವಸ್ಥತೆಯ ಕುರಿತು ಜಾಗೃತಿ, ಜಗತ್ತಿನಾದ್ಯಂತ ಕೋಟ್ಯಂತರ ಜನ ಥಲಸ್ಸೇಮಿಯಾದಿಂದ ಬಳಲುತ್ತಿದ್ದು, ಅವರ ಬದುಕಿಗೆ ಬೆಂಬಲವಾಗಿ ನಿಂತು, ನೈತಿಕ ಸ್ಥೈರ್ಯ ತುಂಬೇಕಿದೆ. ಸೂಕ್ತ ಚಿಕಿತ್ಸೆ ಮತ್ತು ಗುಣಮಟ್ಟದ ಆರೋಗ್ಯ ಸೇವೆಗಳ ಲಭ್ಯತೆಯನ್ನು ಖಾತ್ರಿ ಪಡಿಸಬೇಕಿದೆ.

<><><>

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಜ್ಯಾದ್ಯಂತ ಜನ ಜಾಗ್ರತಿ ಕಾರ್ಯಕ್ರಮಗಳನ್ನು ಆಯೋಜಿಸಿದ್ದಾಗಿ, ಸಾಮಾಜಿಕ ಜಾಲತಾಣ ಎಕ್ಸ್ ಮೂಲಕ ತಿಳಿಸಿದೆ.

<><><>

ಉತ್ತರಕನ್ನಡ ಜಿಲ್ಲೆ ಅಂಕೋಲಾದಲ್ಲಿ, ವಿಜಯನಗರ ಅರಸರ ಆಳ್ವಿಕೆಯ ಕಾಲದ, ಕ್ರಿಯಾಶಕ್ತಿ ಯತಿಗಳ ವಿಗ್ರಹ, ಇತ್ತೀಚೆಗೆ ಪತ್ತೆಯಾಗಿದೆ. ಅಂಕೋಲಾದ ಕೋಟೆಯ ಆವರಣದಲ್ಲಿ, ಕ್ರಿಸ್ತ ಶಕ ಸಾವಿರದ 4 ನೂರಾ 25ಕ್ಕಿಂತ ಹಿಂದಿನದು ಎನ್ನಲಾದ, ಈ ವಿಗ್ರಹವನ್ನು ಸಂಶೋಧಕ ಶಾಮಸುಂದರ ಗೌಡ ಪತ್ತೆ ಮಾಡಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಅವರು ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ಸಂಶೋಧಕ ಶಾಮಸುಂದರ ಗೌಡ ಧ್ವನಿ 39 ಸೆಕೆಂದುಗಳು

<><><>

ರಾಷ್ಟ್ರೀಯ ಶಿಕ್ಷಣ ನೀತಿ – ಎನ್.ಇ.ಪಿ. ಅನ್ವಯ ಜಾರಿಯಲ್ಲಿರುವ 4 ವರ್ಷಗಳ ಪದವಿಯನ್ನು, ರಾಜ್ಯ ಸರ್ಕಾರ 3 ವರ್ಷಗಳಿಗೆ ಸೀಮಿತಗೊಳಿಸಿ ಆದೇಶ ಹೊರಡಿಸಿದೆ. ಶಿಕ್ಷಣ ತಜ್ಞ ಪ್ರೊಫೆಸರ್ ಸುಖದೇವ್ ಥೋರಟ್ ನೇತೃತ್ವದ ಆಯೋಗ ಸಲ್ಲಿಸಿದ ರಾಜ್ಯ ಶಿಕ್ಷಣ ನೀತಿ–ಎಸ್.ಇ.ಟಿ., ಮಧ್ಯಂತರ ವರದಿ ಶಿಫಾರಸಿನಂತೆ, ಉನ್ನತ ಶಿಕ್ಷಣ ಇಲಾಖೆ ಅಧಿಕೃತ ಆದೇಶ ಹೊರಡಿಸಿದೆ. ಎಲ್ಲ ವಿಶ್ವವಿದ್ಯಾಲಯಗಳು ಹಾಗೂ ಸಂಯೋಜಿತ ಪದವಿ ಕಾಲೇಜುಗಳ ಪಠ್ಯಕ್ರಮದಲ್ಲಿ, ಸೂಕ್ತ ಬದಲಾವಣೆ ಮಾಡಿಕೊಳ್ಳಲು ಉನ್ನತ ಶಿಕ್ಷಣ ಇಲಾಖೆ ನಿರ್ದೇಶಿಸಿದೆ.

<><><>

ತುಮಕೂರು ಜಿಲ್ಲೆ ಮಧುಗಿರಿ ತಾಲೂಕಿನ ಸೋಂಪುರ ಗ್ರಾಮದ, ಎಸ್.ಎಲ್.ಶಶಿಕುಮಾರ್, ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆಯಲ್ಲಿ 66ನೇ ರ‍್ಯಾಂಕ್ ಗಳಿಸಿ, ಭಾರತೀಯ ಅರಣ್ಯ ಸೇವೆ ಐ.ಎಫ್.ಎಸ್.ಗೆ ಆಯ್ಕೆಯಾಗಿದ್ದಾರೆ. ಅವರು, ಸೋಂಪುರ ಗ್ರಾಮದ ಶಿಕ್ಷಕ ಲಕ್ಷ್ಮೀರಂಗಯ್ಯ ಹಾಗೂ ಚಂದ್ರಕಾಂತಮ್ಮ ದಂಪತಿ ಪುತ್ರ.

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲೂಕಿನ ಬಾಶೆಟ್ಟಿಹಳ್ಳಿಯ ಅಜಾಕ್ಸ್ ಸರ್ಕಾರಿ ಪಬ್ಲಿಕ್ ಶಾಲೆಗೆ, ಬಿಹಾರ ರಾಜ್ಯದ ಶಿಕ್ಷಣ ಇಲಾಖೆ ಅಧಿಕಾರಿಗಳ ತಂಡ, ಭೇಟಿ ನೀಡಿತು. ಶಾಲೆಯಲ್ಲಿ, ಕಂಪೆನಿ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ ನಿರ್ಮಿಸಲಾದ, ಮೂಲ ಸೌಕರ್ಯ ವೀಕ್ಷಿಸಿ, ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಬಿಹಾರದ ಪಶ್ಚಿಮ ಚಂಪಾರಣ್ ಜಿಲ್ಲೆಯ, ಜಿಲ್ಲಾ ಶಿಕ್ಷಣಾಧಿಕಾರಿ ರಜನೀಕಾಂತ್  ಪ್ರದೀಪ್ ಮಾತನಾಡಿ, ಗುಣಮಟ್ಟದ ಕಲಿಕೆ ಮತ್ತು ಕಲಿಕಾ ವಾತಾವರಣ ಉತ್ತಮ ಪಡಿಸಲು ಯೋಜಿಸಲಾಗಿದೆ ಎಂದರು.

<><><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಹೊಸದಿಲ್ಲಿಯ ರಾಷ್ಟ್ರಪತಿ ಭವನದಲ್ಲಿ ಇಂದು ದೇಶದ ಅತ್ಯುನ್ನತ್ತ ನಾಗರಿಕ ಪುರಸ್ಕಾರ, ಪದ್ಮ ಪ್ರಶಸ್ತಿಗಳನ್ನು, ವಿವಿಧ ಕ್ಷೇತ್ರಗಳಲ್ಲಿ ಅನನ್ಯ ಸಾಧನೆಗೈದ ಗಣ್ಯರಿಗೆ ಪ್ರದಾನ ಮಾಡಿ, ಗೌರವಿಸಲಿದ್ದಾರೆ.

<><><>

ಚಿಕ್ಕಮಗಳೂರು ಜಿಲ್ಲೆ, ಆಲ್ದೂರು ಸಮೀಪದ ಕೆಸವಿನ ಹಕ್ಲು ಕಾಫಿ ತೋಟದಲ್ಲಿ, ಕಾಡಾನೆ ದಾಳಿಯಿಂದ ಮೃತಪಟ್ಟ, ಆನಂದ್ ಪೂಜಾರಿ ಅವರ ನಿವಾಸಕ್ಕೆ, ಮೂಡಿಗೆರೆ ಶಾಸಕಿ ನಯನಾ ಮೋಟಮ್ಮ ಭೇಟಿ ನೀಡಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಸರ್ಕಾರದಿಂದ 15 ಲಕ್ಷ ರೂಪಾಯಿಗಳ ಪರಿಹಾರದ ಚೆಕ್ ವಿತರಿಸಲಾಗಿದೆ. ಕಾಡಾನೆಗಳ ದಾಳಿಯನ್ನು ಪರಿಹರಿಸಲು ಸರ್ಕಾರ ಮುಂದಾಗಲಿದೆ ಎಂದರು.

<><><>

ಶನಿವಾರ 11ನೇ ತಾರೀಖಿನ ವರೆಗೆ, ರಾಜ್ಯದ ಉತ್ತರ ಒಳನಾಡಿನಲ್ಲಿ ಗರಿಷ್ಠ ತಾಪಮಾನ, 38 ರಿಂದ 43 ಡಿಗ್ರಿ ಸೆಲ್ಸಿಯೆಸ್ ಹಾಗೂ ದಕ್ಷಿಣ ಒಳನಾಡಿನಲ್ಲಿ ಮತ್ತು ಕರಾವಳಿ ಜಿಲ್ಲೆಗಳಲ್ಲಿ, ಗರಿಷ್ಠ ತಾಪಮಾನ, 33 ರಿಂದ 38 ಡಿಗ್ರಿ ಸೆಲ್ಸಿಯೆಸ್ ಇರಲಿದೆ ಎಂದು, ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ತಿಳಿಸಿದೆ. ರಾಜ್ಯದ ಮಲೆನಾಡು ಜಿಲ್ಲೆಗಳಲ್ಲಿ ಗರಿಷ್ಠ ತಾಪಮಾನ, 30 ರಿಂದ 38ಡಿಗ್ರಿ ಸೆಲ್ಸಿಯೆಸ್ ಸಾಧ್ಯತೆ. 16ನೇ ತಾರೀಖಿನ ವರೆಗೆ ದಕ್ಷಿಣ ಒಳನಾಡು, ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳಲ್ಲಿ ಗುಡುಗು, ಮಿಂಚು ಮತ್ತು ಬಿರುಗಾಳಿ ಸಹಿತ, ವ್ಯಾಪಕ ಮಳೆಯಾಗುವ ಸಾಧ್ಯತೆ ಇದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಜಾತ್ಯತೀತ ಜನತಾ ದಳ ನಾಯಕ ಹಾಗೂ ಶಾಸಕ ಎಚ್.ಡಿ. ರೇವಣ್ಣ, ಮೇ 14ರ ವರೆಗೆ ನ್ಯಾಯಾಂಗ ಬಂಧನಕ್ಕೆ ಒಳಗಾಗಿದ್ದಾರೆ.

ಧಾರವಾಡದ, ನೂತನ ಟ್ರಿಪಲ್ ಐಟಿ ನಿರ್ದೇಶಕರಾಗಿ, ಪ್ರೊಫೆಸರ್ ಎಸ್.ಆರ್.ಮಹಾದೇವ ಪ್ರಸನ್ನ ನೇಮಕಗೊಂಡಿದ್ದಾರೆ.

<><><>

ಬೆಳ್ತಂಗಡಿಯ ಮಾಜಿ ಶಾಸಕ ಕೆ.ವಸಂತ ಬಂಗೇರ ಅವರ ನಿಧನಕ್ಕೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ.

<><><>

ಚಿತ್ರದುರ್ಗ ಶ್ರೀ ಮುರುಘರಾಜೇಂದ್ರ ಬೃಹನ್ಮಠದಲ್ಲಿ, 10ನೇ ತಾರೀಖಿನ ವರೆಗೆ, ರಾಜ್ಯದ ಸಾಂಸ್ಕೃತಿಕ ನಾಯಕ ಶ್ರೀ ಬಸವೇಶ್ವರ ಜಯಂತಿ ನಿಮಿತ್ತ, ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ರಾಜ್ಯದಲ್ಲಿ ಮಳೆ ಕೊರತೆ; ರಾಜ್ಯ ವಿಪತ್ತು ಪರಿಹಾರ ನಿಧಿಯಡಿ, ಬರ ನಿರ್ವಹಣೆಗೆ ಆದ್ಯತೆ.
- ಧಾರವಾಡ–ಹುಬ್ಬಳ್ಳಿಯ ರೈತರ ಸಂತೆಗಳಿಗೆ, 'ದೇಸಿ'ಯ, ಜವಾರಿ ಸಂತಿ, ಮಾದರಿ.
- ಎಸ್.ಎಸ್.ಎಲ್.ಸಿ. ಪರೀಕ್ಷೆ 1 ರ ಫಲಿತಾಂಶ ಇಂದು, ಪ್ರಕಟ.
- ಥಲಸ್ಸೇಮಿಯಾ ಜಾಗ್ರತಿ, ವಿಶ್ವ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ